

## ಮಗನಿಗಾಗಿ ಸನ್ನಿ ಆ್ಯಕ್ಷನ್-ಕಟ್

ನಟ, ನಿರ್ಮಾಪಕ ಸನ್ನಿ ದೇವಲ್ ಮತ್ತೆ ನಿರ್ದೇಶನಕ್ಕೆ ಮರಳಿದ್ದಾರೆ. ಅವರ ಪುನರ್‌ಪ್ರವೇಶವಾಗಿರುವುದು ಮಗನಿಗಾಗಿ. ಈ ಹಿಂದೆ 'ದಿಲ್ಲಗಿ' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದ ಸನ್ನಿ, ಮಗ ಕರಣ್ ದೇವಲ್‌ರನ್ನು ಚಿತ್ರರಂಗಕ್ಕೆ ಪರಿಚಯಿಸಲು ಸ್ವತಃ ನಿರ್ದೇಶಕನ ಟೋಪಿ ಧರಿಸಲು ಮುಂದಾಗಿದ್ದಾರೆ. ತಂದೆ ಹಾಕಿಕೊಟ್ಟ ಪರಂಪರೆಯನ್ನು ಸನ್ನಿ ಪಾಲಿಸುತ್ತಿದ್ದಾರೆ. ಮಕ್ಕಳಾದ ಸನ್ನಿ ಮತ್ತು ಬಾಬ್ಬಿ ಇಬ್ಬರನ್ನೂ ಸ್ವಂತ ಬ್ಯಾನರ್‌ನಲ್ಲಿ ಚಿತ್ರರಂಗಕ್ಕೆ ಪರಿಚಯಿಸಿದ್ದು ತಂದೆ ಧರ್ಮೇಂದ್ರ. ಬಳಿಕ ಸೋದರಳಿಯ ಅಭಯ್ ದೇವಲ್ ಕೂಡ ತೆರೆಮೇಲೆ ಬಂದರು. ಈಗ ಕರಣ್ ಸರದಿ. ಸದ್ಯಕ್ಕೀಗ ತಮ್ಮ ನಿರ್ಮಾಣದ 'ಯಮ್ಲಾ ಪಗ್ಲಾ ದೀವಾನಾ 2'ರ ಪ್ರಚಾರದಲ್ಲಿ ಮುಳುಗಿದ್ದಾರೆ ಸನ್ನಿ. ಮಗ ಕರಣ್ ಈ ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿ ದುಡಿದು ಅನುಭವ ಗಿಟ್ಟಿಸಿಕೊಂಡಿದ್ದಾನೆ. ಇದೇ ವರ್ಷ ಮಗನ ಚಿತ್ರವನ್ನು ಪ್ರಾರಂಭಿಸುವ ಇರಾದೆ ಅವರದು. 'ನಾನು, ನನ್ನ ಸಹೋದರ ಸಿನಿರಂಗಕ್ಕೆ ಬಂದಂತೆಯೇ ಮಗನನ್ನೂ ಕರೆತರುತ್ತಿದ್ದೇನೆ. ಅವನಿಗಾಗಿ ಜಾಗ ಬಿಟ್ಟುಕೊಡಲೇಬೇಕು. ಪೋಷಕರು ಮುಖ್ಯದಾರಿಯವರೆಗೆ ಕರೆತರಬಹುದು. ಆದರೆ ಮುಂದಿನದ್ದು ಆತನ ವೈಯಕ್ತಿಕ ಪಯಣವಾಗಿರುತ್ತದೆ' ಎಂದಿದ್ದಾರೆ ಸನ್ನಿ.

## ಮಾಧುರಿಗೆ ಮುತ್ತಿಕ್ಕಲು 'ಲಂಚ'!

'ಧಕ್ ಧಕ್' ಬೆಡಗಿಯ ಸೌಂದರ್ಯಕ್ಕೆ ಸ್ವತಃ ಕಲಾವಿದ ಎಂ.ಎಫ್ ಹುಸೇನ್ ಮನಸೋತಿದ್ದರು. ದಶಕಗಳ ಹಿಂದೆ ಯುವಕರ ಎದೆಯಲ್ಲಿ ಕಿಚ್ಚು ಹಚ್ಚಿಸಿದ್ದ ಮಾಧುರಿ ದೀಕ್ಷಿತ್‌ರ ವರ್ಚಸ್ಸು ಈಗಲೂ ಕುಂದಿಲ್ಲ. ಸಿನಿರಂಗದೊಳಗಿನ ಮಾಧುರಿ ಅಭಿಮಾನಿಗಳಿಗೆ ಕಡಿಮೆಯಿಲ್ಲ. ನಟ ರಣಬೀರ್ ಕಪೂರ್ ಮಾಧುರಿಯ ಕಟ್ಟಾಭಿಮಾನಿ. ಹೀಗಿರುವಾಗ ನೆಚ್ಚಿನ ನಟಿ ಜೊತೆ ಕುಣಿಯುವ ಅವಕಾಶ ಸಿಕ್ಕರೆ? ಅಂಥ ಅವಕಾಶ ಸಿಕ್ಕಾಗ ರಣಬೀರ್‌ಗೆ ಸ್ವರ್ಗಕ್ಕೆ ಮೂರೇ ಗೇಣು. ರಣಬೀರ್ ಅಭಿನಯದ 'ಯೇ ಜವಾನಿ ಹೇ ದೀವಾನಿ' ಚಿತ್ರದ ಐಟಂ ಹಾಡೊಂದರಲ್ಲಿ ಮಾಧುರಿ ಹೆಜ್ಜೆ ಹಾಕಿದ್ದಾರೆ. ಆ ಹಾಡಿನ ಸಂದರ್ಭದಲ್ಲಿ ಮಾಧುರಿಯ ಕೆನ್ನೆಗೆ ಮುತ್ತು ನೀಡಲು ಅವಕಾಶ ನೀಡುವಂತೆ ನಿರ್ದೇಶಕ ಅಯಾನ್ ಮುಖರ್ಜಿಗೆ ರಣಬೀರ್ 'ಲಂಚ' ನೀಡಿದ್ದರಂತೆ. ಹಾಗಂತ ಸ್ವತಃ ರಣಬೀರ್ ಚಿತ್ರದ ಪ್ರಚಾರದ ವೇಳೆ ಅದನ್ನು ಹೇಳಿಕೊಂಡಿದ್ದಾರೆ. ಮಾಧುರಿ ದೀಕ್ಷಿತ್ ನನ್ನ ಮೊದಲ ಪ್ರೇಮ. ಆಕೆಗೆ ಮದುವೆಯಾದಾಗ ನನ್ನ ಹೃದಯ ಒಡೆದೇ ಹೋಗಿತ್ತು. ಆಕೆಯನ್ನು ನೋಡುವುದರ ಜೊತೆಗೆ ನರ್ತಿಸುವ ಅವಕಾಶ ಸಿಕ್ಕ ಮೇಲಂತೂ ನನ್ನ ಸಂತೋಷಕ್ಕೆ ಮಿತಿಯೇ ಇರಲಿಲ್ಲ ಎಂದು ಪ್ರೇಮ ಲಹರಿ ಹರಿಬಿಟ್ಟಿದ್ದಾರೆ ರಣಬೀರ್. ಮಾಧುರಿ ಎಂದರೆ ಪ್ರಾಮಾಣಿಕತೆ, ಉತ್ಸಾಹ ಮತ್ತು ಪ್ರತಿಭೆ ಎಂಬ ಬಣ್ಣನೆ ರಣಬೀರ್‌ರದ್ದು. ಮಾಧುರಿ ಕುರಿತು ಕೊನೆಯೇ ಇಲ್ಲದಂತೆ ಮಾತನಾಡಿದ ರಣಬೀರ್, ನಿರ್ದೇಶಕರಿಗೆ ನೀಡಿದ 'ಲಂಚ'ವೇನು ಎಂಬುದನ್ನು ಮಾತ್ರ ಬಾಯ್ಬಿಡಲಿಲ್ಲ.



## ಪರಿಣೀತಿಯ ಆಸೆ!



'ಬಾಲಿವುಡ್‌ನಲ್ಲಿ ಯಾರ ಜೊತೆಗಾದರೂ ಫ್ಲರ್ಟ್ ಮಾಡಲು ಆಯ್ಕೆಯಿತ್ತರೆ, ನನ್ನ ಆಯ್ಕೆ ರಣಬೀರ್ ಕಪೂರ್'– ಇದು ನಟಿ ಪರಿಣೀತಿ ಚೋಪ್ರಾ ಉವಾಚ. ಪರಿಣೀತಿಯ ಈಗಿನ ಪೀಳಿಗೆಯ ಅತ್ಯಂತ ನೆಚ್ಚಿನ ನಟರಲ್ಲಿ ರಣಬೀರ್ ಒಬ್ಬರಂತೆ. ಪ್ರೇಮ ಚೆಲ್ಲಾಟಕ್ಕೆ ಅವಕಾಶ ಸಿಕ್ಕರೆ ರಣಬೀರ್ ಕಪೂರ್ ರನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಎಂದಿದ್ದಾರೆ 'ಇಷ್ಕ್‌ಜಾದೇ'ಯ ಬೆಡಗಿ. ಈಗಾಗಲೇ ರಣಬೀರ್ ಜೊತೆ ಪರಿಣೀತಿ ಹೆಸರು ತಳಕು ಹಾಕಿಕೊಂಡಿರುವಾಗ ಪರಿಣೀತಿಯ ಈ ಮಾತು ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಆಗಿದೆ. 'ಲೇಡೀಸ್ ವರ್ಸಸ್ ರಿಕ್ಕಿ ಬೆಹೆಲ್' ಚಿತ್ರದ ಪುಟ್ಟ ಪಾತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಈಕೆ ನಟಿಸಿರುವುದು ಎರಡು ಚಿತ್ರಗಳಲ್ಲಾದರೂ ಅಭಿನಯ ಮತ್ತು ಮಾತು ಎರಡರಿಂದಲೂ ಸುದ್ದಿ ಮಾಡಿರುವಾಕೆ. 'ಮಾಜಾ' ಪಾನೀಯದ ಜಾಹೀರಾತಿನಲ್ಲಿ ಮಿಂಚುತ್ತಿರುವ ಪರಿಣೀತಿಗೆ ಅವಕಾಶಗಳು ಸಿಕ್ಕಿರುವುದು ಪ್ರಿಯಾಂಕಾ ಚೋಪ್ರಾ ಸಂಬಂಧಿ ಎಂಬ ಕಾರಣಕ್ಕೆ. ಈಗ ಈಕೆಗೆ ಪ್ರಿಯಾಂಕಾ ಮೂಲಕ ತನ್ನನ್ನು ಗುರುತಿಸುವುದು ಇಷ್ಟವಾಗುತ್ತಿಲ್ಲವಂತೆ. ಪ್ರಿಯಾಂಕಾಳ ಸಂಬಂಧಿ ಎನ್ನುವುದನ್ನು ಕೇಳಿ ಸಾಕಾಗಿದೆಯಂತೆ.